ಅ) ಹಾಗಿದ್ದಲ್ಲಿ ಯಾವಾಗ ಸಲ್ಲಿಸಲಾಗಿದೆ ಹಾಗೂ ಅದರ ಅಂದಾಜು ಮೊತ್ತವೆಷ್ಟು?

ಇ) ಈ ವರೆಗೆ ರಾಜ್ಯ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ? (ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಪ್ರತ್ಯೇಕ ವಿವರ?

ಶ್ರೀ ಬಿ. ರಮಾನಾಥ್ ರೈ (ಬಂದರು, ಮೀನುಗಾರಿಕೆ ಹಾಗೂ ಪ್ರದೇಶಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಸೆಪ್ಟೆಂಬರ್ 1997 ರಲ್ಲಿ 575 ಕೋಟಿ ರೂ.ಗಳ ಸಮಗ್ರ ಯೋಜನೆಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಇದರ ಪೈಕಿ ಅತಿಸೂಕ್ಷ್ಮ ಪ್ರದೇಶಗಳೆಂದು ಗುರುತಿಸಲಾದ ಭಾಗಗಳಿಗೆ 141.005 ಕೋಟಿ ರೂ.ಗಳ ಅಂದಾಜು ವೆಚ್ಚದ ಪ್ರಸ್ತಾವನೆ ಪ್ರತ್ಯೇಕವಾಗಿ ದಿನಾಂಕ 20-10-2000 ರಂದು ಸಲ್ಲಿಸಲಾಗಿದೆ.

ಇ)	ದಕ್ಷಿಣ ಕನ್ನಡ ಜಿಲ್ಲೆ	:	ರೂ. 1110.94 ಲಕ್ಷಗಳು
	ಉಡುಪಿ ಜಿಲ್ಲೆ	:	ರೂ. 3128.79 ಲಕ್ಷಗಳು
	ಉತ್ತರ ಕನ್ನಡ ಜಿಲ್ಲೆ	:	ರೂ. 1485.41 ಲಕ್ಷಗಳು
	ಒಟ್ಟು	:	**ರೂ. 5725.14 ಲಕ್ಷಗಳು.**

ಉಡುಪಿ ಜಿಲ್ಲೆಯ ಗಂಗೊಳ್ಳಿ ಜೆಟ್ಟಿ ನಿರ್ಮಾಣಕ್ಕೆ ಕೇಂದ್ರದ ಅನುಮತಿ

3129 - ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ) : ಮಾನ್ಯ ಬಂದರು, ಮೀನುಗಾರಿಕೆ ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಗಂಗೊಳ್ಳಿ ಜಟ್ಟಿ ನಿರ್ಮಾಣದ ಬಗ್ಗೆ ಕೇಂದ್ರ ಸರ್ಕಾರದ ಅನುಮತಿ ದೊರೆತಿದೆಯೇ?

ಆ) ದೊರೆತ್ತಿದ್ದಲ್ಲಿ ಎಂದಿನಿಂದ ಕೆಲಸ ಪ್ರಾರಂಭವಾಗುವುದು?

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :

ಅ) ಹೌದು.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಮಲ್ಪೆ ಜೆಟ್ಟಿಯ 2ನೇ ಹಂತದ ಕಾಮಗಾರಿ

3130 - ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ) : ಮಾನ್ಯ ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲ್ಪೆ ಜೆಟ್ಟಿಯ 2ನೇ ಹಂತದ ಕಾಮಗಾರಿ?